

# ಸಿತಾರ್ ಸಾಮ್ರಾಟನ ನೂರರ ನೆನಪು

ಹಿಂದೂಸ್ತಾನಿ ಸಂಗೀತದ ಸಿತಾರ್ ವಾದನದಲ್ಲಿ 'ಮಾಂತ್ರಿಕ'ನಂತೆ ಮೆರೆದಿದ್ದ ಪಂ. ರವಿಶಂಕರ್ ಅವರ ಜನ್ಮಶತಮಾನೋತ್ಸವ (ಹುಟ್ಟಿದ್ದು 1920) ವರ್ಷವಿದು. ಕೊರೊನಾದಿಂದಾಗಿ ಶತಸಂಭ್ರಮ ಆಚರಣೆಗೆ ಅಡ್ಡಿಯಾದರೂ 'ಸ್ವರ ಸಾಮ್ರಾಟ'ನನ್ನು ಅವರ ಶಿಷ್ಯಂದಿರು, ಸಂಗೀತರಸಿಕರು ನಾನಾ ವಿಧದಲ್ಲಿ ನೆನೆಯುತ್ತಿದ್ದಾರೆ. ಪಂಡಿತ್‌ಜಿ ಅವರ ಮಗಳು, ಯುವ ಸಿತಾರ್‌ವಾದಕಿ ಅನೌಷ್ಕಾ ಶಂಕರ್ ಲಂಡನ್‌ನಲ್ಲಿ ನೆಲೆಸಿದ್ದು, ತಂದೆಯವರ ಜೊತೆಗಿನ ಸಂಗೀತ ಪಯಣದ ಬಗ್ಗೆ 'ಸುಧಾ'ದೊಂದಿಗೆ ಮಾತನಾಡಿದ್ದಾರೆ. ಡಿಸೆಂಬರ್ 11 ಪಂ. ರವಿಶಂಕರ್ ಅವರ ಪುಣ್ಯತಿಥಿ.

■ ಉಮಾ ಅನಂತ್

## ಪಂಡಿತ್ ರವಿಶಂಕರ್ ಪುತ್ರಿ ಅನೌಷ್ಕಾ ಶಂಕರ್ ಸಂದರ್ಶನ

**◆ ಪಂಡಿತ್‌ಜಿ ಹಾಕಿಕೊಟ್ಟ ಸಂಗೀತ ಪರಂಪರೆ ಮುಂದುವರಿಸುವ ಹೊಣೆಗಾರಿಕೆ ನಿಮ್ಮ ಮೇಲಿದೆ. ಇದನ್ನು ಹೇಗೆ ಮುಂದುವರಿಸಬೇಕೆಂದು ಯೋಜನೆ ಹಾಕಿಕೊಂಡಿದ್ದೀರಿ?**

ಸಂಗೀತದಲ್ಲಿ ಒಂದು ಉತ್ತಮ ತಳಪಾಯ ಹಾಕಿಕೊಟ್ಟ ತಂದೆಯವರ ಪರಿಶ್ರಮ ಹಾಗೂ ಸಾಧನೆಗೆ ಬೆಲೆಕಟ್ಟುವುದು ಸಾಧ್ಯವಿಲ್ಲ. ಇಲ್ಲಿ ಸಮರ್ಪಣಾ ಭಾವ ಒಂದೇ ನನಗೆ ಮುಖ್ಯ ಎನಿಸುತ್ತದೆ. ಸಂಗೀತ ಪರಂಪರೆಯನ್ನು ಎಲ್ಲ ಆಯಾಮಗಳಿಂದ ಮುಂದುವರಿಸುವ ಪ್ರಯತ್ನ ಸದಾ ನಡೆದಿದೆ. ಅವರು ಭಾರತೀಯ ಸಂಗೀತಕ್ಕೆ ಎಷ್ಟು ಕೊಡುಗೆ ನೀಡಿದ್ದರು ಎಂಬುದು ಸಹ ಎಣಿಕೆಗೆ ಮೀರಿದ್ದು. ಇತ್ತೀಚೆಗೆ ದಲೈಲಾಮ ಅವರ ಬದುಕನ್ನು ಆಧರಿಸಿ ಮಾಡಿದ ಆಲ್ಬಂನಲ್ಲಿ ತಂದೆಯವರ ಮನಸ್ಸಿನಾಳದಲ್ಲಿದ್ದ ವಿಚಾರಧಾರೆಯನ್ನು ತರುವ ಪ್ರಯತ್ನ ಮಾಡಿದ್ದೇನೆ. ಇದೇ ರೀತಿ ಅಮೆರಿಕದ ಕಲಾವಿದರನ್ನು ಒಳಗೊಂಡು ಒಂದು ವಿಶಿಷ್ಟ ಸಂಗೀತ ಆಲ್ಬಂ ಹೊರತರುವ ನಿಟ್ಟಿನಲ್ಲೂ ಕೆಲಸ ನಡೆದಿದೆ.

**◆ ಪಂಡಿತ್‌ಜಿ ಅವರ ಜನ್ಮಶತಮಾನೋತ್ಸವ ಆಚರಣೆಯ ಸಂಭ್ರಮ ಯಾವ ರೀತಿಯಲ್ಲಿದೆ?**

ಸಂಸ್ಮರಣಾ ಕಾರ್ಯಕ್ರಮ, ಪುಸ್ತಕ, ಆಲ್ಬಂ ಬಿಡುಗಡೆ ಸೇರಿದಂತೆ ಹಲವು ಕಾರ್ಯಕ್ರಮ ನಡೆಸುವ ಯೋಜನೆ ಇತ್ತು. ಸದ್ಯದ ಪರಿಸ್ಥಿತಿಯಲ್ಲಿ ಇದ್ಯಾವುದೂ ಕೈಗೂಡಲಿಲ್ಲ. ಅವರ ಶಿಷ್ಯರೆಲ್ಲ ಸೇರಿ ಆನ್‌ಲೈನ್‌ನಲ್ಲೇ ಕಾರ್ಯಕ್ರಮ ಮಾಡಿದ್ದೇವೆ, 'ಡಿಜಿಟಲ್ ಟ್ರಿಬ್ಯೂಟ್' ಎಂಬ ಶೀರ್ಷಿಕೆಯಡಿ. ಅವರ ಶಿಷ್ಯರಾದ ಆಲಿವರ್ ಕ್ರಸ್ಕೆ ಎಂಬವರು 'ಇಂಡಿಯನ್ ಸನ್' ಎಂಬ ಪಂಡಿತ್‌ಜಿ ಅವರ ಬಯಾಗ್ರಫಿ ಬಿಡುಗಡೆ ಮಾಡಿದ್ದಾರೆ. ನಾನು ಕೂಡ ಒಂದು ಸಂಗೀತ ವಿಡಿಯೊ ವಿಭಿನ್ನವಾಗಿ ಸಿದ್ಧಪಡಿಸಿದ್ದು ಇದನ್ನೂ ವರ್ಚುವಲ್ ಆಗಿ

